ಪ್ರಮಾಣ ವಚನ ಬೋಧಿಸಿದ ದಿನಾಂಕಃ **07.01.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜೆ.ಕೆ. ವಕೀಲರಿಂದ**

ದಾವಾ ಆಸ್ತಿಯು ನಮಗೆ ಸೇರಿದ್ದು ಎಂದು ಪರಿಹಾರ ಕೇಳಿ ಈ ದಾವೆಯನ್ನು ಹಾಕಿದ್ದೇನೆ. ದಾವಾ ಆಸ್ತಿಯ ಸರ್ವೆ ನಂ.**60/4**. ಅದರ ವಿಸ್ತೀರ್ಣ **1** ಎಕರೆ **33** ಗುಂಟೆ. **1**ನೇ ಪ್ರತಿವಾದಿಯು ನನ್ನ ತಮ್ಮ. **2**ನೇ ಪ್ರತಿವಾದಿಯು **1**ನೇ ಪ್ರತಿವಾದಿಯ ಹೆಂಡತಿ. ಹುಚ್ಚಯ್ಯನವರು ನನ್ನ ಮುತ್ತಾತ. ಹುಚ್ಚಯ್ಯನಿಗೆ ಎಷ್ಟು ಜನ ಮಕ್ಕಳಿದ್ದರು ಎಂದರೆ ಗೊತ್ತಿಲ್ಲ. ಹನುಮಂತಣ್ಣನವರು ನನಗೆ ತಾತನಾಗಬೇಕು. ಹನುಮಂತಣ್ಣನವರಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ಮುನಿಆಂಜಿನಪ್ಪ, ಮುನಿಶಾಮಯ್ಯ ಮತ್ತು ಮುನಿಯಮ್ಮ. ನನ್ನ ತಂದೆಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದಾರೆ ಎಂದರೆ ಸರಿ. ನನ್ನ ಇಬ್ಬರು ಸಹೋದರಿಯರನ್ನು ನಾನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಹನುಮಂತರಾಯಪ್ಪನವರು ನನ್ನನ್ನು ದತ್ತು ತೆಗೆದುಕೊಂಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಈ ರೀತಿ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು **1**ನೇ ಪ್ರತಿವಾದಿಯು ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.**3** ರ ಪ್ರಕಾರ ಸರ್ವೆ ನಂ.**60/4** ರಲ್ಲಿ **1** ಎಕರೆ **21** ಗುಂಟೆ **1**ನೇ ಪ್ರತಿವಾದಿಯ ಭಾಗಕ್ಕೆ ಹೋಗಿರುವ ಬಗ್ಗೆ ನಮೂದಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಯ ಪ್ರಕಾರ ವಿಭಾಗದ ಆಧಾರದ ಮೇಲೆ **1992** ರಲ್ಲಿ ಮ್ಯೂಟೇಷನ್ ಆಗಿದ್ದರೂ ಕೂಡ ನಾನು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ದಾವಾ ಆಸ್ತಿಯ ಮೇಲೆ ಹಕ್ಕು ಕೇಳುತ್ತಿದ್ದೀರಾ ಎಂದರೆ ಸಾಕ್ಷಿಯು ನಾನು ಹನುಮಂತರಾಯಪ್ಪನವರ

ದತ್ತುಪುತ್ರನಾಗಿದ್ದು, ಅವರ ಆಸ್ತಿ ನನಗೆ ಬರಬೇಕಂದು ಈ ಕೇಸನ್ನು ಹಾಕಿದ್ದೇನೆ ಎಂದು ಹೇಳುತ್ತಾರೆ. ದಿನಾಂಕ:**30.08.1984** ರ ಕ್ರಯಪತ್ರದಂತೆ ಹನುಮಂತರಾಯಪ್ಪನವರು ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದು ಹಾಗೂ ಅದರ ಖಾತೆ ನನ್ನ ಹೆಸರಿಗೆ ವರ್ಗಾವಣೆಯಾಗಿಲ್ಲ ಎಂದು ತಿಳಿಸಿದ್ದೇನೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿ.ಪಿ.**2** ಕ್ರಯಪತ್ರದಲ್ಲಿ ದಾವಾ ಆಸ್ತಿಯನ್ನು ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಹನುಮಂತರಾಯಪ್ಪನವರ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಾತನವರಿಂದ ನನ್ನ ತಂದೆಗೆ ಬಂದಿದ್ದು, ನಂತರ ನನ್ನ ಮತ್ತು **1**ನೇ ಪ್ರತಿವಾದಿಯ ನಡವೆಯಾದ ವಿಭಾಗ ಪತ್ರದಲ್ಲಿ **1**ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದ್ದು, ನಂತರ ಅವರು ಸಾಲ ಪಡೆಯುವ ಉದ್ದೇಶದಿಂದ **2**ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನಿ.ಪಿ.**5** ರ ಪಹಣಿಯಲ್ಲಿ ಹನುಮಂತಣ್ಣನವರ ಹೆಸರಿನಲ್ಲಿ ಖಾತೆ ಬರುತ್ತಿದೆ ಎಂದರೆ ಸರಿ. ಹನುಮಂತಣ್ಣನಿಂದ ನನ್ನ ತಂದೆಗೆ ಬಂದಿದ್ದು, ನಂತರ ನನ್ನ ಹಾಗೂ **1**ನೇ ಪ್ರತಿವಾದಿಯ ನಡುವೆಯಾದ ವಿಭಾಗದಲ್ಲಿ ದಾವಾ ಆಸ್ತಿಯು **1**ನೇ ಪ್ರತಿವಾದಿಯ ಭಾಗಕ್ಕೆ ಹೋಗಿದೆ ಎಂದರೆ ಸರಿಯಲ್ಲ. ಏಪ್ರಿಲ್ **1985** ರಲ್ಲಿ ನನ್ನ ಹಾಗೂ **1**ನೇ ಪ್ರತಿವಾದಿಯ ನಡುವೆಯಾದ ವಿಭಾಗದಲ್ಲಿ ನನಗೆ **7** ಐಟಂ ಆಸ್ತಿಗಳು ಹಾಗೂ **1**ನೇ ಪ್ರತಿವಾದಿಗೂ ಸಹ **7** ಐಟಂ ಆಸ್ತಿಗಳು ಹೋಗಿವೆ ಎಂದರೆ ಸರಿಯಲ್ಲ. ಸರ್ವೆ ನಂ.**60/4** ರ ಪೈಕಿ **1** ಎಕರೆ **21** ಗುಂಟೆಯು **1**ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಹಾಗೂ ಉಳಿಕೆ **11** ಗುಂಟೆಯು ನನ್ನ ಭಾಗಕ್ಕೆ ಬಂದಿದ್ದು, ಅದನ್ನು ನಾನು ಇನ್ನು ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಆಧಾರದ ಮೇಲೆ **1992** ರಲ್ಲಿ ಮ್ಯೂಟೇಷನ್ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಹನುವಂತರಾಯಪ್ಪನವರಿಗೆ ಸೇರಿದ ಆಸ್ತಿಯಾಗದೇ ಇರುವ ಕಾರಣ ಅದನ್ನು ನನಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಬಿ ಷಡ್ಯೂಲ್ ಆಸ್ತಿಯಲ್ಲಿ ಈಗ ನೀಲಗಿರಿ, ತೇಗದ ಮರ ಮತ್ತು ಸಿಲ್ವರ್ ಮರಗಳು ಇವೆ. ಸದರಿ ಮರಗಳನ್ನು **15** ವರ್ಷದ ಈಚೆಗೆ ನೆಡಲಾಗಿದೆ. ಸದರಿ ಮರಗಳನ್ನು **1**ನೇ ಪ್ರತಿವಾದಿಯೇ ನೆಟ್ಟಿದ್ದಾರೆ

ಎಂದರೆ ಸರಿಯಲ್ಲ. ನಾವೇ ನೆಟ್ಟಿದ್ದೇವೆ. ನೀಲಗಿರಿ ಮರಗಳನ್ನು 1ನೇ ಪ್ರತಿವಾದಿಯೇ ಕಟಾವು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಮಾಡಿದ್ದೇನೆ, 1ನೇ ಪ್ರತಿವಾದಿಯೂ ಕೂಡ ಕಟಾವು ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಮರಗಳನ್ನು ಕಟಾವು ಮಾಡಿ ಮಾರಾಟ ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ. ನಾನು ಬಿ ಷಡ್ಯೂಲ್ ನಲ್ಲಿ ಯಾವುದೇ ಮರಗಳನ್ನು ನೆಟ್ಟಿಲ್ಲ ಹಾಗೂ ಅವುಗಳನ್ನು ಕಟಾವು ಮಾಡಿ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಇತ್ತೀಚೆಗೆ ಜಮೀನಿನ ಬೆಲೆ ಹೆಚ್ಚಾಗುತ್ತಿರುವ ಕಾರಣ ನಾನು ಪ್ರತಿವಾದಿಯರ ವಿರುದ್ದ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.